ಒಂದು ಕಿಲೋಕ್ಕೆ ಮಾತ್ರ ತನ್ನ ವ್ಯಾಪಾರವನ್ನು ಮುಗಿಸಿದ್ದ.

ಊರಿಗೆ ಬಂದ ಮೇಲೆ ಆತ ತನ್ನ ಅಮ್ಮ ಸಿಸಿಲಾ ಬಾಯಿಯ ಕೈಯಲ್ಲಿ ಮಾವಿನಹಣ್ಣುಗಳನ್ನು ಇಟ್ಟಾಗ ಒಂದು ಕಿಲೋ ಇದ್ದ ಆ ಹಣ್ಣುಗಳಲ್ಲಿ ಒಂದು ಹಣ್ಣು ಕೆಟ್ಟು ಹೋಗಿತ್ತು. ಉಳಿದ ನಾಲ್ಕು ಹಣ್ಣುಗಳು ಚೆನ್ನಾಗಿಯೇ ಇದ್ದುವು. ಮಗನಲ್ಲಿ 'ಕಿಲೋಕ್ಕೆ ಎಷ್ಟು ಕೊಟ್ಟಿದ್ದೆ' ಎಂದು ಆಕೆ ಕೇಳಿದಾಗ ಆತ 'ಐದು ನೂರು ಕೊಟ್ಟಿದ್ದೆ' ಎಂದು ಹೇಳಿದ. ಸಿಸಿಲಾ ಟೀಚರ್ 'ಅಷ್ಟೂ ಕೊಟ್ಟಿಯಾ?' ಎಂದು ಹೌಹಾರಿದ್ದಲ್ಲದೆ, 'ಇದು ಬೇಡ ಇತ್ತು' ಎಂದು ರಾಗವೂ ಎಳೆದರು. ಆದರೆ ಆ ಹಣ್ಣುಗಳ ಸೌಂದರ್ಯ ನೋಡಿ, ಅವುಗಳನ್ನು ಯಾವಾಗ ಕತ್ತರಿಸುವುದು ಎನ್ನುವ ತುಡಿತ ಟೀಚರಮ್ಮನ ಮನಸ್ಸಿನಲ್ಲಿ ಹುಟ್ಟುತ್ತಿದ್ದ ಹಾಗೆ, ಆಕೆ ಒಂದು ಮಾವಿನಹಣ್ಣಿನ ಸಿಪ್ಪೆ ತೆಗೆದು ನೀಟಾಗಿ ಚೂರಿಯಿಂದ ಗೀರಿದಳು. ಮಾಂಸದ ತುಂಡುಗಳ ಹಾಗೆ ಇದ್ದ ಅವನ್ನು ಮತ್ತೆ ಚಿಕ್ಕ ಚಿಕ್ಕದಾಗಿ ತುಂಡರಿಸುವಾಗ ಆಕೆಯ ನಾಲಗೆಯಲ್ಲಿ ನೀರು ಹರಿದು ಬಂತು. ತತ್‌ಕ್ಷಣ ತನ್ನ ಬಾಯಿಗೆ ಒಂದು ತುಂಡನ್ನು ಹಾಕಿಕೊಂಡ ಸಿಸಿಲ ಟೀಚರಮ್ಮನಿಗೆ ತನ್ನ ಬಾಯೊಳಗೆ ಹಣ್ಣು ಕರಗುವಾಗ ಸ್ವರ್ಗವೇ ಇಳಿದು ಬಂದಂಥ ಅನುಭವವಾಗಿ ಅದು ಏನು ಎಂದು ಹೇಳಲಾಗದಂತಾಗಿ 'ಯುರೇಕಾ' ಎಂದು ಕುಣಿಯಬೇಕೆನಿಸಿತು. ಆ ಸಂಭ್ರಮ ಮತ್ತು ಸಂತೋಷಗಳೇ ಮೈವೆತ್ತು ಎದ್ದು ನಿಂತ ಹಾಗಾದ ಆಕೆ ಪಕ್ಕದ ಹಾಲ್‌ನಲ್ಲಿ ಇದ್ದ ಮಗನಲ್ಲಿಗೆ ಧಾವಿಸಿ ಬಂದು 'ಸಿರಿಲ್, ಸ್ವಲ್ಪ ಕಣ್ಣು ಮುಚ್ಚಿ ಬಾಯಿ ತೆರೆಯೋ' ಎಂದರು. ಆತ 'ಅಮ್ಮ ನಾನು ಇನ್ನೂ ನಿಮ್ಮ ಚಿಕ್ಕ ಮಗುವೇ?' ಎಂದು ನಗುತ್ತಾ 'ಈಗ ನಾನು ಒಂದು ಮಗುವಿನ ಅಪ್ಪ ಎಂದು ಗೊತ್ತಿಲ್ಲವೇ ತಮಾಷೆ ಯಾಕೆ?' ಎಂದ. ಆದರೆ ತನ್ನ ಅಮ್ಮನ ಕೈಯಲ್ಲಿ ಏನೋ ಇದ್ದು ಅದನ್ನು ಆಕೆ ತನಗೆ ನೀಡಲು ಈ ನಾಟಕ ಸೃಷ್ಟಿಸುತ್ತಿದ್ದಾಳೆ ಎಂದುಕೊಂಡು ಆತ ಬಾಯಿ ತೆರೆಯದೆ ಸುಮ್ಮನಾದ. ಆದರೆ ಸಿಸಿಲಾ ಟೀಚರಮ್ಮ 'ನಿನಗೆ ಈಗ ಒಬ್ಬ ಮಗ ಇರುವುದು ನನಗೆ ಗೊತ್ತಲ್ಲ!' ಎಂದು ಮಗನನ್ನು ದಬಾಯಿಸಿ 'ಇನ್ನೂ ನಿನಗೆ ಒಂದು ಮಗು ಆಗಲಿ, ಆದರೆ ಈಗ ಮಾತ್ರ ಬಾಯಿಬಿಡು' ಎಂದು ಹೇಳಿದಾಗ ಸಿರಿಲ್‌ಗೆ 'ಇಲ್ಲ' ಎನ್ನಲಾಗಲಿಲ್ಲ. ಆತ ಅಮ್ಮನ ಆಣತಿ ಪಾಲಿಸಿದ. ಅವನ ಬಾಯಿಯೊಳಗೆ ಮಾವಿನ ತುಂಡು ಆಕೆ ಹಾಕಿದ ತಕ್ಷಣ ಅವನಿಗೆ ಆ ಹಣ್ಣಿನ ತುಂಡನ್ನು ನುಂಗುವುದೋ ಅಥವಾ ಅಮ್ಮನನ್ನು ಅಪ್ಪಿ ಹಣೆಗೆ ಮುತ್ತಿಡುವುದೋ ಎನ್ನುವುದು ತಿಳಿಯದಂತಾಯಿತು. ಆತ ಹಣ್ಣನ್ನು ಸವಿಸವಿದು ನುಂಗುತ್ತಾ 'ಇದು ನಾನು ತಂದ ಹಣ್ಣಾ?' ಎಂದು ಪ್ರಶ್ನಿಸಿದ. 'ಹ್ಞೂ' ಎಂದು ಹೇಳಿದ ಟೀಚರ್ 'ಐನೂರಲ್ಲ ಸಾವಿರ ಕೊಟ್ಟರೂ ಇಂಥ ಹಣ್ಣು ಸಿಗದು ಮಗಾ!' ಎಂದರು ಖುಶಿಯಲ್ಲಿ.

ರಾತ್ರಿಯೊಳಗೆ ಉಳಿದ ಆ ನಾಲ್ಕೂ ಹಣ್ಣು ಇಬ್ಬರ ಹೊಟ್ಟೆಯನ್ನು ಸೇರಿತು. ಸಿರಿಲ್ ಮರುದಿನ ಬೆಳಗ್ಗೆ ಎದ್ದವನೇ ತಾನು ತಂದ ಐದೂ ಹಣ್ಣಿನ ಬೀಜಗಳನ್ನು ಬೇರೆ ಬೇರೆ ಪ್ಲಾಸ್ಟಿಕ್ ತೊಟ್ಟೆಗಳಲ್ಲಿ ಮಣ್ಣುಗೊಬ್ಬರ ಹಾಕಿ ಹೂತಿಟ್ಟು 'ಈ ಐದೂ ಸಸಿಗಳು ಒಂದು ಒಂದೂವರೆ ಅಡಿ ಬೆಳೆಯುವವರೆಗೆ ಎಲ್ಲೂ ಇವನ್ನು ನೆಡಬೇಡ ಮತ್ತು ಎರಡು ಗಿಡಗಳನ್ನು ನಮ್ಮ ತೋಟದಲ್ಲೇ ಹಾಕಬೇಕು. ಒಂದು ಗಿಡವನ್ನು ಬೇಕಾದರೆ ಚರ್ಚಿಗೆ ಇನ್ನೊಂದನ್ನು ಬೇಕಾದರೆ ನಮ್ಮ ಊರಿನ ದೇವಸ್ಥಾನಕ್ಕೆ ಮತ್ತೊಂದನ್ನು ನಿಮ್ಮ ಶಾಲೆಗೆ ಕೊಟ್ಟು, ಅವರಿಗೆಲ್ಲ ಈ ಗಿಡಗಳನ್ನು ಚೆನ್ನಾಗಿ ಸಾಕಲು ಹೇಳಿ' ಎಂದ.

ಟೀಚರ್ 'ಆಯ್ತು ಮಗಾ ಹಾಗೇ ಮಾಡ್ತೇನೆ' ಎಂದು ಭರವಸೆ ನೀಡಿದಳು. ಇದಾಗಿ